ಓಎಸ್ 275/2023

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 03.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ದಾವ ಆಸ್ತಿಗಳು ಮೂಲತಃ ಪ್ರತಿವಾದಿಗಳ ತಂದೆ ಲೇ. ಮಾದಯ್ಯ ರವರಿಗೆ ಸೇರಿದವು ಎಂದರೆ ಸಾಕ್ಷಿಯು ಅವರಿಗೆ ಪೌತಿ ಖಾತೆಯಾಗಿದೆ ಆದರೆ ಸರ್ವೇ ನಂಬರ್ 49 ರಲ್ಲಿ ನನ್ನ ತಂದೆಯ ತಮ್ಮ ಮಲಿಯಯ್ಯ ರವರಿಗೂ ಹಿಸ್ಸೆ ಇರುತ್ತದೆ ಎಂದು ನುಡಿಯುತ್ತಾರೆ. ದಾವ ಆಸ್ತಿ ಸರ್ವೇ ನಂಬರ್ 49 ರಲ್ಲಿ ಪ್ರತಿವಾದಿಗಳ ತಂದೆ ಲೇ. ಮಾದಯ್ಯ ಮತ್ತು ಅವರ ಸಹೋದರ ಮಲಿಯಯ್ಯ ರವರಿಗೂ ಹಿಸ್ಸೆ ಇದೆ ಎಂದರೆ ಸರಿ. ಲೇ. ಮಾದಯ್ಯ ರವರ ಹಿಸ್ಸೆ ಅವರ ಮಕ್ಕಳಿಗೂ ಸೇರಬೇಕು ಎಂದರೆ ಸರಿ. 1ನೇ ವಾದಿಯ ಗಂಡ 2 ರಿಂದ 4ನೇ ವಾದಿಗಳ ತಂದೆ ಶಿವಲಿಂಗಂ ರವರು ಸಹ ಲೇ. ಮಾದಯ್ಯ ರವರ ಮಗನಾಗಿದ್ದು, ಲೇ. ಮಾದಯ್ಯ ರವರ ಆಸ್ತಿಯಲ್ಲಿ ಅವರಿಗೂ ಸಹ ಹಕ್ಕು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಶಿವಲಿಂಗಂ ರವರು 6ನೇ ಪ್ರತಿವಾದಿಯಾದ ನನ್ನಿಂದ 2012 ರವರಗೆ ಹಂತ ಹಂತವಾಗಿ 4 ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 4 ಲಕ್ಷ ಹಣವನ್ನು ಶಿವಲಿಂಗಂ ರವರಿಗೆ ನೀಡಿರುವ ಬಗ್ಗೆ ದಾಖಲಾತಿ ಇರುವುದಿಲ್ಲ, ನಗದಾಗಿ ನೀಡಿರುತ್ತೇನೆ. ದಾವ ಆಸ್ತಿಗಳು ನಮ್ಮ ಕುಟುಂಬದಲ್ಲಿ ವಿಭಾಗವಾಗಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ದಾವ ಐಟಂ ನಂಃ 2ನೇ ಸ್ವತ್ತು ಸರ್ವೇ ನಂಬರ್ 49 ರಲ್ಲಿ ಮಾತ್ರ ನನ್ನ ತಂದೆಯ ಸಹೋದರ ಮಲಿಯಯ್ಯ ರವರಿಗೂ ಸಹ ಭಾಗಾಂಶದ ಹಕ್ಕು ಇದೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗದ ಕಾರಣ ಶಿವಲಿಂಗಂ ರವರು ನನ್ನಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಶಿವಲಿಂಗಂ ರವರಿಗೆ ಯಾವುದೇ ಹಣ ನೀಡದೇ ಇದ್ದರೂ ಸಹ ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಜಂಟಿ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ನಮ್ಮ ಜಮೀನಿನ ಮಧ್ಯದಲ್ಲಿ ರಸ್ತೆ ಹಾದು ಹೋಗಿರುವ

ಬಗ್ಗೆ ದಾಖಲಾತಿ ಇದೆ ಮತ್ತು ಅದನ್ನು ಹಾಜರುಪಡಿಸಿದ್ದೇನೆ. 7ನೇ ಪ್ರತಿವಾದಿ ಶಿವಲಿಂಗಂ ರವರು ಈಗ ತಿಮಿಳುನಾಡಿನ ಗೂಡಲೂರು ನಲ್ಲಿ ವಾಸ ಇದ್ದಾರೆ ಎಂದರೆ ಸರಿ. 7ನೇ ಪ್ರತಿವಾದಿ ನನ್ನೊಂದಿಗೆ ಚೆನ್ನಾಗಿರುವುದರಿಂದ ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿ ಯಾವುದೇ ರಸ್ತೆ ಹಾದು ಹೋಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ